


**International Journal of Kannada Research**
www.kannadajournal.com

**ISSN: 2454–5813**
IJKR 2023; 9(1): 253-255
© 2023 IJKR
www.kannadajournal.com
Received: 02-01-2023
Accepted: 04-02-2023

**ವನಜಾಕ್ಷಿ ಎಂ.**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಕರ್ನಾಟಕ, ಭಾರತ

**Corresponding Author:**
**ವನಜಾಕ್ಷಿ ಎಂ.**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಕರ್ನಾಟಕ, ಭಾರತ

# ಕಿರಗೂರಿನ ಗಯ್ಯಾಳಿಗಳು ಮತ್ತು ಬಂಡಾಯ ಪ್ರಜ್ಞೆ

**ವನಜಾಕ್ಷಿ ಎಂ.**

## ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ಸೃಜನಶೀಲ ಬರಹಗಾರರಲ್ಲಿ ಒಬ್ಬರಾಗಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಅವರು ಕೊಟ್ಟ ಕೊಡುಗೆ ಅಪಾರವಾದುದು. ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ನೆಲೆಸಿದ್ಧ ತೇಜಸ್ವಿ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದು ಪ್ರವೃತ್ತಿಯಿಂದ ಉತ್ತಮ ಕಥಗಾರರಾಗಿ–ಕಾದಂಬರಿಕಾರರಾಗಿ ಹೊರಹೊಮ್ಮಿದ್ದಾರೆ. ರಾಷ್ಟ್ರಕವಿ ಮಹಾಕವಿ, ದಾರ್ಶನಿಕ ಕವಿ ಎಂದು ಪ್ರಸಿದ್ದರಾಗಿದ್ದ ಕುವೆಂಪುರವರ ಪುತ್ರನಾಗಿದ್ದ ಪೂರ್ಣಚಂದ್ರ ತೇಜಸ್ವಿ ಅವರು ಯಾವುದೇ ಅಹಂ ಇಲ್ಲದೆ ಸಾಹಿತ್ಯ ಲೋಕದಲ್ಲಿ ಬೆಳೆದವರು. ಒಂದು ಆಲದ ಮರದ ಕೆಳಗಡೆ ಮತ್ತೊಂದು ದೊಡ್ಡದಾದ ಮರವು ತನ್ನ ರೆಂಬೆ ಕೊಂಬೆಗಳನ್ನು ಎಲ್ಲಾ ಕಡೆಗಳಲ್ಲಿ ಚಾಚಿಕೊಂಡಿರುವಂತೆ ತೇಜಸ್ವಿಯವರು ತಮ್ಮ ತಂದೆಯವರ ಪ್ರತಿಭೆಯ ಮೂಲಕ ಕನ್ನಡದಲ್ಲಿ ತಮ್ಮ ಅಸ್ಮಿತೆಯನ್ನು ಮೀರಿ ಬರೆದ ಲೇಖಕರಾಗಿದ್ದಾರೆ.

ನವ್ಯ ನವ್ಯೋತ್ತರ ತಲೆಮಾರಿನ ಕಾಲಘಟ್ಟಗಳನ್ನು ಮೀರಿ ಪ್ರಗತಿಪರ ವೈಚಾರಿಕತೆಯ ನಿಲುವುಗಳನ್ನು ಹೊಂದಿದ್ದರು. ತೇಜಸ್ವಿಯವರು ಬರೆದ ಕಥಾಸಂಕಲಗಳಲ್ಲಿ ‘ಹುಲಿಯೂರಿನ ಸರಹದ್ದು’, ‘ಅಬಚೂರಿನ ಪೋಸ್ಟಾಫೀಸು’, ‘ಕಿರಗೂರಿನ ಗಯ್ಯಾಳಿಗಳು’ ಪ್ರಮುಖವಾದವುಗಳು. ‘ಅಬಚೂರಿನ ಪೋಸ್ಟಾಫೀಸು’ ಕಥಾಸಂಕಲನ ಪ್ರಕಟವಾದ ಹದಿನೇಳು ವರ್ಷಗಳ ನಂತರದಲ್ಲಿ ‘ಕಿರಗೂರಿನ ಗಯ್ಯಾಳಿಗಳು ಕಥಾಸಂಕಲನ ಹೊರಬಂದು ಕನ್ನಡಿಗರ ಕೈಸೇರಿತು. ಈ ಕೃತಿಯು ಇಂಗ್ಲೀಷ್, ಹಿಂದಿ, ಮರಾಠಿ, ಮಲಯಾಳಿ ಭಾಷೆಗಳಿಗೆ ಅನುವಾದವಾಗಿದೆ. ಈ ಕಥೆಯ ನಾಟಕದ ರೂಪಾಂತರ ಈಗಾಗಲೆ ಅನೇಕ ಬಾರಿ ರಂಗಭೂಮಿಯ ಮೇಲೆ ಪ್ರದರ್ಶಿತವಾಗಿದೆ. ಈ ಕಥಾಸಂಕಲನದಲ್ಲಿ ‘ಕಿರಗೂರಿನ ಗಯ್ಯಾಳಿಗಳು’, ‘ಕೃಷೇಗೌಡನ ಆನೆ’, ‘ಮಾಯಾಮೃಗ, ‘ರಹಸ್ಯವಿಶ್ವ’ ಎಂಬ ನಾಲ್ಕು ಕಥೆಗಳಿವೆ ಮೊದಲಿನ ಎರಡು ಕಥೆಗಳು ನೀಳ್ಗತೆಯ ಸಾಲಿಗೆ ಸೇರುತ್ತವೆ. ಇಲ್ಲಿನ ಕಥೆಗಳು ಸಂಪೂರ್ಣವಾಗಿ ಗ್ರಾಮೀಣತೆಯ ನೆಲೆಯಿಂದಲೇ ರಚಿತವಾದವುಗಳಾಗಿವೆ.

ಕಿರಗೂರಿನ ಗಯ್ಯಾಳಿಗಳು ಕಥೆಯ ಶೀರ್ಷಿಕೆಯೇ ಸ್ತ್ರೀಪರವಾದ ಪ್ರತಿಭಟನೆಯನ್ನು ಸೂಚಿಸುವಂತಿದೆ. ಸ್ತ್ರೀವಾದದ ನೆಲೆಯಲ್ಲಿ ಅಪಾರವಾದ ಕಾಳಜಿಗಳನ್ನು ತುಂಬಿಕೊಂಡು ಬರೆದ ಕಥಾವಸ್ತುವಾಗಿದೆ. ಹೆಣ್ಣಿನ ಶೋಷಣೆಯೇ ಈ ಕತೆಯ ವಸ್ತುವಾಗಿದೆ. ಇಲ್ಲಿನ ಕಥಾ ನಿರೂಪಣೆಯ ಕ್ರಮ ತೇಜಸ್ವಿ ಕಥನದ ವಿಭಿನ್ನ ಆಯಾಮವಾಗಿದೆ. ಸಹ್ಯಾದ್ರಿ ಪರ್ವತಗಳ ಮಧ್ಯದಲ್ಲಿ ಇದ್ದ ಊರು ಕಿರಗೂರು. ಇಲ್ಲಿನ ಕಥೆ ಪ್ರಾರಂಭವಾಗುವುದೇ ನೈಸರ್ಗಿಕ ವಾತಾವರಣದ ಬಿರುಗಾಳಿ ಬೀಸುವಿಕೆಯ ಮೂಲಕ ಆರಂಭವಾಗುತ್ತದೆ. ಈ ಗಾಳಿ ಅಂತಿಂತಹ ಗಾಳಿ ಆಗಿರಲಿಲ್ಲ. ಈ ಗಾಳಿಯಲ್ಲಿ ಬೀಸಿಕೊಂಡು ಹೋಗುವಂತಿತ್ತು. ಕಿರಗೂರಿನ ಮಹಿಳೆಯರು ತಮ್ಮ ಮೇಲೆ ನಡೆದ ಅನ್ಯಾಯದ ವಿರುದ್ಧ ಪುರುಷ ಪ್ರಧಾನ ವ್ಯವಸ್ಥೆಯನ್ನು ವಿರೋಧಿಸಿ ಪ್ರತಿಭಟಿಸುವಿಕೆಯೇ ‘ಕಿರಗೂರಿನ ಗಯ್ಯಾಳಿಗಳು’ ಕಥೆಯ ಕೇಂದ್ರವಸ್ತು. ಕಿರಗೂರಿನ ಭೌಗೋಳಿಕ ಪರಿಸರದೊಂದಿಗೆ ಅಲ್ಲಿನ ಜನರ ಸ್ವಭಾವದ ಪರಿಚಯವನ್ನು ತೇಜಸ್ವಿಯವರು ಕಥೆಯ ಆರಂಭವದಲ್ಲಿ ಮಾಡುತ್ತಾರೆ. ಕಿರಗೂರಿನಲ್ಲಿ ಬೀಸಿದ್ದ ಗಾಳಿ ಸುತ್ತಮುತ್ತಲೂ ಹರಡಿಕೊಂಡಿದ್ದ ಸಂಘರ್ಷಗಳ್ನು ಅರಿಯಲು ಮುಖ್ಯವಾಗುತ್ತದೆ. ಅಲ್ಲಿನ ಒಟ್ಟಾರೆ ಪರಿಸರವನ್ನು ಸ್ಥಿರವಾದ ಸಾಂಪ್ರದಾಯಿಕತೆ ಎಂದು ನಾವು ತಿಳಿದರೆ ಅಲ್ಲಿ ಬೀಸುವ ಗಾಳಿ ಹೊಸತನವನ್ನು ಬಯಸುವ ಸಂಕೇತವಾಗಿದೆ.

‘ಕಿರಗೂರಿನ ಗಯ್ಯಾಳಿಗಳು’ ಕಥೆ ನೀಳ್ಗತೆಗಳ ಸಾಲಿಗೆ ಸೇರಬಹುದಾಗಿದ್ದು ಕಾದಂಬರಿಯ ಸ್ಥಾನವನ್ನು ಪಡೆಯುವಂತಿದೆ. ಸಿಗೇಗೌಡರ ಮಗ ಸುಬ್ಬಯ್ಯನಿಗೆ ಮದುವೆ ಮಾಡಿ ತಂದಿದ್ದ ಹೆಣ್ಣು ದಾನಮ್ಮ ಅತಿ

ರೂಪವತಿಯಾದ ಈಗೆ ಅಷ್ಟೇ ಕೋಪಿಷ್ಠೆಯಾಗಿದ್ದಳು. ಈಕೆಯ ರೂಪಲಾವರ್ಣಯಕ್ಕೆ ಮರುಳಾಗಿದ್ದ ಗಂಡ ಸುಬ್ಬಯ್ಯ ಹೆಂಡತಿ ಬಯ್ಯುವುದನ್ನು ಕೇಳಿ ಹೆದರಿ ಅವಳನ್ನು ಬಿಟ್ಟು ಬಿಡುವ ಮಾತಿರಲಿ ಹೊಡೆದರೂ ಪರವಾಗಿಲ್ಲ ಎಂಬಂತೆ ಜೀವನ ಸಾಗಿಸುತ್ತಿದ್ದ ಬಿರುಗಾಳಿಯಂತಹ ಗಾಳಿಯೂ ಕೂಡ ದಾನಮ್ಮನ ಬೈಯ್ಗುಳಕ್ಕೆ ಅಂಜಿ ನಿಧಾನವಾದಂತೆ ಭಾಸವಾಗುತ್ತಿತ್ತು. "ಆ ಗಯ್ಯಾಳಿ ಬಾಯಿಗೆ ಮಳೆ ಗಾಳಿ ಸುತ ಹೆದರ್ತದೆ ಅಂತಾಯು"[೧] ಹೀಗೆ ಗಂಡಸರೆಲ್ಲರು ದಾನಮ್ಮನ ಮಾತುಗಳಿಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡುತ್ತಿದ್ದರು. ಇಲ್ಲಿನ ಕತೆಯ ಪ್ರಮುಖ ಪಾತ್ರವಾದ ದಾನಮ್ಮ ಸ್ತ್ರೀಪರವಾದ ಪ್ರತಿನಿಧಿಯಂತೆ ಕಾಣುತ್ತಾಳೆ. ಕಥೆ ಪಾರಂಭವಾದುವುದೇ ಕಿರಗೂರಿನ ಹೆಂಗಸರು ಗದ್ದೆ ನಾಟಿ ಮಾಡುವಾಗಿನ ಸಂದರ್ಭದಲ್ಲಿ ಇದ್ದಕ್ಕಿದಂತೆ ಬೀಸಿದ ಬೀರುಗಾಳಿಯ ದೆಸೆಯಿಂದ ಅವರ ಉಡುಪುಗಳು ಅಸ್ತವ್ಯಸ್ತಗೊಂಡಾಗ ಮಾತನಾಡುವ ಅವರ ಬೈಯ್ಗುಳಗಳು, ಅಲ್ಲಿನ ಜಗಳಗಳು ಸ್ತ್ರೀಯರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಕಿರಗೂರಿನ ಗಂಡಸರು ಹೆಂಡ ಕುಡಿಯುವ ಚಟಕ್ಕೆ ಬಲಿಯಾಗಿದ್ದರಿಂದ ಶಾರೀರಿಕವಾಗಿ ಸಣಕಲಾಗಿದ್ದರು. ಸ್ತ್ರೀಯರು ಮಾತ್ರ ತಮ್ಮ ಸೌಂದರ್ಯದಿಂದ ನೋಡಿದವರನ್ನು ಬೆಚ್ಚಿ ಬೀಳಿಸುತ್ತಿದ್ದರು. ಹೀಗಿದ್ದರು. ಯಾರೂ ಅವರ ತಂಟೆಗೆ ಹೋಗುತ್ತಿರಲಿಲ್ಲ. ಏಕೆಂದರೆ ಗಂಡಸರು ಎಷ್ಟು ಸೌಮ್ಯರೋ ಹೆಂಗಸರು ಅಷ್ಟೇ ಬಜಾರಿಯರಾಗಿದ್ದರು. "ಆ ಊರಗಳ ಹರಿಜನರು ಬಿಲ್ಲವರು ಒಕ್ಕಲಿಗರು ಎಲ್ಲರೂ ರೂಪದಲ್ಲಾಗಲಿ ನಡವಳಿಕೆಯಲ್ಲಾಗಲಿ ಒಂದೇತರ ನೋಡಿದವರೆಲ್ಲ ಕಥಗೆ ಸಿಕ್ಕದ ದ್ರಾಕ್ಷಿ ಹುಳಿ ಎಂದು ಹೇಳುವಂತೆ ಗಾಂಚಾಲಿ ಮುಂಡೇರು[೨] ಎಂದು ಅವರನ್ನು ಕಂಡು ಗೊಣಗುತ್ತಿದ್ದರು. ಸ್ತ್ರೀವಾದವೆಂದರೆ ಪುರುಷ ದ್ವೇಷ, ಬಜಾರಿತನ, ಕುಟುಂಬಗಳನ್ನು ಹಾಗೂ ಮನೆಗಳನ್ನು ಒಡೆಯುವ ಮನೆಹಾಳತನ ಎಂದು ಹಲವರು ಅಂದುಕೊಂಡಿದ್ದ ಭಾವನೆಗಳನ್ನು ಅಳಿಸಿ ಇದು ಆ ಯಾವುದೂ ಅಲ್ಲ. ಬರೀ ಮಾನವತಾವಾದ ಮಾತ್ರ ಎಂಬ ನಿಜವಾದ ಅರ್ಥವನ್ನು ತಿಳಿಸಿಕೊಡಬೇಕಾಗಿತ್ತು.[೩] ಎಂಬ ಅಭಿಪ್ರಾಯವನ್ನು ಪ್ರಮುಖ ಸ್ತ್ರೀವಾದಿ ವಿಮರ್ಶಕಿಯಾದ ಶಿವಗಂಗಾ ರುಮ್ಮಾ ಅವರು ಸ್ತ್ರೀಯ ವಿರೋಧದ ನೆಲೆಯನ್ನು ವಿವರಿಸುತ್ತಾರೆ. ಬಜಾರಿಯರು ಎಂದರೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದಾಗ ತಮ್ಮನ್ನು ಸ್ವರಕ್ಷಣೆ ಮಾಡಿಕೊಂಡು ಹೋರಾಡುವ ಅನಿವಾರ್ಯತೆ ಎದುರಾದಾಗ ಅದು ಬದುಕುವ ನೆಲೆಯದಾಗಿರುತ್ತದೆ.

'ಕಿರಗೂರಿನ ಗಯ್ಯಾಳಿಗಳು' ಕಥೆಯ ಕೇಂದ್ರ ಪಾತ್ರವಾದ ಸುಬ್ಬಯ್ಯನ ಹೆಂಡತಿ ದಾನಮ್ಮ ನ್ಯಾಯದ ಪರವಾಗಿ ಹೋರಾಡುವ ವ್ಯಕ್ತಿತ್ವದವಳಾಗಿದ್ದಾಳೆ. ತನ್ನ ವೈಯಕ್ತಿಕ ಬದುಕನ್ನು ಕಟ್ಟಿಕೊಳ್ಳುವ ನೆಪದಲ್ಲಿ ಅಲ್ಲಿನ ಸಮಸ್ಯೆಗಳಿಗೆ ಸ್ಫೋಟಗೊಳ್ಳುವ ವಿಚಾರಗಳು ಸಾಮಾಜಿಕ ಪರಿಸರಕ್ಕೆ ನಾಯಕತ್ವವನ್ನು ನೀಡುವಷ್ಟರ ಮಟ್ಟಿಗೆ ದಾನಮ್ಮ ಬೆಳೆದು ನಿಲ್ಲುತ್ತಾಳೆ. ಕಿರಗೂರಿನ ಹಲವಾರು ಸ್ತ್ರೀಯರ ಮನದಲ್ಲಿ ತನಗರಿವಿಲ್ಲದಂತೆಯೇ ಹೊಸ ಬದಲಾವಣೆಯನ್ನು ತರಲು ದಾನಮ್ಮಳ ಪಾತ್ರ ಪ್ರೇರಕ ಶಕ್ತಿಗೆ ಕಾರಣವಾಗುತ್ತದೆ. ದಾನಮ್ಮಳ ಕೋಪ, ತಾಪ, ಸಿಟ್ಟು ಎಲ್ಲವೂ ತನ್ನ ಬದುಕನ್ನು ಭದ್ರಪಡಿಸಿಕೊಳ್ಳಬೇಕೆನ್ನುವ ಹಂಬಲದ ಜೊತೆಜೊತೆಗೆ ಸಾಮಾಜಿಕ ಪರಿಸರವೊಂದಕ್ಕೆ ನಾಯಕತ್ವದ ಗುಣ ನೀಡುತ್ತಾ ಸ್ತ್ರೀಯರ ಸಮಸ್ಯೆಗಳಿಗೆ ಸ್ತ್ರೀಯರ ಪ್ರತಿಧ್ವನಿಯಾಗಿ ನಿಲ್ಲುತ್ತಾಳೆ. ಪುರುಷರು ಹೆಣ್ಣನ್ನು ಲೈಂಗಿಕತೆಯ ದೃಷ್ಟಿಯಿಂದ ಮಾತ್ರ ಕಾಣುತ್ತಾರೆ. 'ಬಲೇ ಗಾಂಚಲಿ ಮುಂಡೇರು ಮಲೆ ಬಂದೋರಿಗೆ ನೆಲಾ ಕಾಣದಿಲ್ಲಂತೆ, ಸೊಕ್ಕಿ ನೆಣಾ ಉಕ್ತದೆ ಅವರ ಮೈಯಾಗೆ ಒಬ್ಬೊಬ್ರೂ ಹತ್ತು ಹತ್ತು ಹಡಿಯೋ ಹಂಗ ಮಾಡಬೇಕು, ಪುರುಸೊತ್ತೇ ಕೊಡಬಾರ್ದು. ಹಂಗಿದ್ರೆ ನೋಡಪ್ಪಾ ಈ ಹಾಳ್ತುಂಡೇರ್ನು ಹದ್‌ಬಸ್ತಿಗೆ ತರಬೌದು."[೪] ಈ ಮಾತುಗಳನ್ನು ಮಾರಸಿದ್ದನಿಗೆ ಹೇಳುತ್ತಾನೆ. ಸ್ತ್ರೀಯನ್ನು ಕಾಮದ ದೃಷ್ಟಿಯಿಂದ ಕಾಣುವ ಪುರುಷ ಪ್ರಧಾನ ವ್ಯವಸ್ಥೆಯನ್ನು ವಿರುದ್ಧ ಪ್ರತಿಭಟಿಸುವುದು ದಾನಮ್ಮ ಪಾತ್ರದಲ್ಲಿ ಕಾಣುತ್ತದೆ. ಮಕ್ಕಳನ್ನು ಹೆರುವ ಕಾರ್ಖಾನೆಯಂತೆ ಪರಂಪರಾಗತವಾಗಿ ಬಂದಿರುವುದನ್ನು ಮಾರನ ಮಾತಿನ ಮೂಲಕ ವ್ಯಕ್ತವಾಗಿದೆ. ತಮ್ಮ ಶೌರ್ಯವನ್ನು ಹೊಗಳಿಕೊಳ್ಳುವ ಪುರುಷಪಾತ್ರಗಳು ವಾಸ್ತವದಲ್ಲಿ ನಿವೀರ್ಯರಂತೆ ಗೋಚರಿಸುವುದು ದೊಡ್ಡ ವ್ಯಂಗ್ಯವೇ ಸರಿ. ಸೊಂಟದ ಉಳುಕಿನಿಮದಾಗಿ ಬೈರಪ್ಪ ಸುಬ್ಬಯ್ಯ ಮತ್ತು ಕಾಳೇಗೌಡರನ್ನು ಕುರಿತು. ಸೊಂಟ ಬಿದ್ದ ಗಂಡಸರತ್ತ ಸಂಸಾರ ಮಾಡೋದೇನನ್ನ ಎಂಬ ಪ್ರಶ್ನೆಯನ್ನು ದಾನಮ್ಮ ಧೈರ್ಯವಾಗಿ ಕೇಳುತ್ತಾಳೆ. ಕಿರಗೂರಿನ ಸ್ತ್ರೀಸಮುದಾಯದ ಪ್ರತಿನಿಧಿಯಾಗಿರುವ ದಾನಮ್ಮ ಸಾಗುವ ದಾರಿ ಮಾನವೀಯ ನೆಲೆಯಿಂದ ಕೂಡಿದೆ. ಪುರುಷ ಪ್ರಧಾನ ಸಮಾಜ ಕಟ್ಟಿದ್ದ ಸಂಕೋಲೆಗಳಿಗೆ ಪ್ರತಿಷ್ಠೆಗಳಿಗೆ ಕಿರಗೂರಿನ ಹೆಂಗಸರು ಬಲಿಯಾಗಲಿಲ್ಲ. ಮೋಸ ವಂಚನೆಯನ್ನು ಕಂಡಾಗ ಸಿಡಿದೇಳುವ ಗುಣ ಅಲ್ಲಿನ ಸ್ತ್ರೀಯರಿಗೆ ದಾನಮ್ಮನ ಮಾದರಿಯಲ್ಲೇ ಆಗುತ್ತಿತ್ತು. ಪುರುಷರು ನಾನಾ ಬಗೆಯ ಕಿತಾಪತಿಗಳನ್ನು ಮಾಡಿಕೊಂಡು ಕೊನೆಗೆ ಎಲ್ಲವನ್ನು ತಂದು ಹೆಂಗಸರ ತಲೆಗೆ ಕಟ್ಟುವ ಮೋಸದ ಬಗ್ಗೆ ಎಲ್ಲಾ ಸ್ತ್ರೀಯರು ಎಚ್ಚೆತ್ತುಕೊಳ್ಳುತ್ತಿದ್ದರು. ಸಮಾಜ ನಿರ್ಮಿತ ಪುರುಷ ವ್ಯವಸ್ಥೆಯಲ್ಲಿ ಎಲ್ಲ ವರ್ಗದ ಮಹಿಳೆಯರು ಬಲಿಯಾಗುವುದನ್ನು ತೀವ್ರವಾಗಿ ಎಲ್ಲರೂ ಒಟ್ಟಾಗಿ ಪ್ರತಿಭಟಿಸುತ್ತಾರೆ.

'ಕಿರಗೂರಿನ ಗಯ್ಯಾಳಿಗಳು ಕತೆ ಸ್ತ್ರೀಯ ಆದ್ಯತೆಗಳ ಸೂಚನೆಯನ್ನು ಹೊಂದಿದೆ. ಗಯ್ಯಾಳಿಗಳಾಗಿ ಸ್ಫೋಟಗೊಳ್ಳಬಲ್ಲ ಇವರು ಅನಿರೀಕ್ಷಿತ, ಆಕಸ್ಮಿಕ ಅಪಾಯಗಳನ್ನು ಸಾಂದರ್ಭಿಕವಾದ ಒಂದು ಧೈರ್ಯ, ಸ್ಫೂರ್ತಿಗಳಿಂದ ತಡೆಗಟ್ಟಬಲ್ಲ ರಕ್ಷಕರೂ ಆಗಬಲ್ಲರು' ಎಂಬುವುದನನ್ನು ಎಸ್.ವಿ. ಪ್ರಭಾವತಿಯವರು ಈ ನೀಳ್ಗತೆಯನ್ನು ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯ ಸಮಂಜಸವಾಗಿದೆ.

ಲಿಂಗತಾರತಮ್ಯದಲ್ಲಿ ಮಾನವೀಯ ಸಂಬಂಧಗಳ ಆಳಕ್ಕಿಳಿದು ಅಲ್ಲಿನ ವಾಸ್ತವವನ್ನು ಶೋಧಿಸುವ ಮಾದರಿ 'ಕಿರಗೂರಿನ ಗಯ್ಯಾಳಿಗಳು' ಕತೆಯಲ್ಲಿ ಸಶಕ್ತವಾಗಿ ಮೂಡಿಬಂದಿದೆ. ಪಿತೃಪ್ರಧಾನ ವ್ಯವಸ್ಥೆಯೇ ಪ್ರಧಾನವಾಗಿರುವ ಕುಟುಂಬದೊಳಗೆ ಉಂಟಾಗುವ ಹಲವಾರು ಸಮಸ್ಯೆಗಳನ್ನು ಸ್ತ್ರೀಜಾಗೃತಿಯ ಮೂಲಕ ಸಾಮಾಜಿಕವಾಗಿ ಸಿಡಿದೇಳುವ ಹೊಸದಾದ ಆಲೋಚನೆಯೊಂದಕ್ಕೆ ಎಡೆಮಾಡಿಕೊಳ್ಳುತ್ತದೆ. ಕಿರಗೂರಿನ ಸಾಮಾಜಿಕ ಪರಿಸರವು ಅಂಧಕಾರದಲ್ಲಿರುವ ಮಹಿಳೆಯರನ್ನು ನವಸಮಾಜ ನಿರ್ಮಾಣ ಮಾಡಲು ಪ್ರತಿರೋಧಿಸುವಂತೆ ಮಾಡುತ್ತದೆ. ಸಮಾಜದಲ್ಲಿ ಮಹಿಳೆ ಮತ್ತು ಪುರುಷರು ಕೂಡಿ ಬಾಳಬೇಕಾಗಿರುವುದರಿಂದ ಇಲ್ಲಿ ಯಾರೂ ಹೆಚ್ಚಲ್ಲ, ಯಾರೂ ಕಡಿಮೆ ಅಲಲ್. ಸ್ತ್ರೀಯರಲ್ಲಿರುವ ಬುದ್ಧಿವಂತಿಕೆ, ತಾಳ್ಮೆ, ಶಕ್ತಿಯು ಹೆಣ್ಣು ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಲ್ಲಳು ಎಂಬಂತೆ ತೊಟ್ಟಿಲು ಗೂಗುವ ಕೈ ಸಮಾಜವನ್ನು ಬೇಕಾದರೂ ರಕ್ಷಿಸಬಲ್ಲದು. ಎಂಬುದು ಇಲ್ಲಿನ ಕಥನದ ಆಶಯವಾಗಿದೆ. ಪುರುಷ ನಿರ್ಮಿತ ಸಮಾಜದಲ್ಲಿ ಅಧಿಕಾರ ದೌರ್ಜನ್ಯ ಹಾಗೂ ದರ್ಪದ ಮನೋಭಾವದಿಂದ ಸ್ತ್ರೀಯರನ್ನು ಭೋಗದ ವಸ್ತುವನ್ನಾಗಿ ಬಳಸಿಕೊಂಡು ನವಸಮಾಜ ಆಕೆಯಲ್ಲಿರುವ ಕ್ರಿಯಾಶೀಲತೆ ಬಂಡಾಯ ಪ್ರಜ್ಞೆ ಇವುಗಳನ್ನು ಇಲ್ಲಿನ ಸ್ತ್ರೀ ಪಾತ್ರಗಳಲ್ಲಿ ಗಮನಿಸಬಹುದು, ಕೌಟುಂಬಿಕ ನೆಲೆಯಿಮದ ಆರಮಭವಾಗುವ ಸಮಸ್ಯೆಯನ್ನು ಸಾಮಾಜಿಕವಾಗಿ ಪರಿವರ್ತನೆಯಾಗುವಾಗ ಅಭಿವ್ಯಕ್ತವಾಗದ ಸಂಘರ್ಷಗಳನ್ನು ಎದುರಿಸುವಲ್ಲಿ ಬಂಡಾಯ ಪ್ರಜ್ಞೆಯನ್ನು ಇಲ್ಲಿನ ಕಥನ ಅನಾವರಣಗೊಳ್ಳುತ್ತದೆ.

**ಅಡಿಟಿಪ್ಪಣಿ**

೧. ಕಿರಗೂರಿನ ಗಯ್ಯಾಳಿಗಳು, ಪುಟ–೭
೨. ಕಿರಗೂರಿನ ಗಯ್ಯಾಳಿಗಳು, ಪುಟ–೭
೩. ಆಧುನಿಕ ಕನ್ನಡ ಮಹಿಳಾ ಸಾಹಿತ್ಯಚರಿತ್ರೆ, ಪುಟ–೮೧
೪. ಕಿರಗೂರಿನ ಗಯ್ಯಾಳಿಗಳು, ಪುಟ–೧೫